# ಪ್ರೇಮದ ಮಾರ್ಗ

## ಕಬೀರ್ (ಕ್ರಿ.ಶ. 1440-1518)

ಹಿಂದೂ-ಮುಸ್ಲಿಮ್-ಸಿಖ್ ಧರ್ಮಾನುಯಾಯಿಗಳಿಂದ ಸಮಾನವಾಗಿ ಗೌರವಿಸಲ್ಪಡುವ, ತಾನು 'ರಾಮ ಮತ್ತು ಅಲ್ಲಾ ಇವರ ಮಗ'ನೆಂದು ಹೇಳುತ್ತಿದ್ದ ಕಬೀರ್ 15ನೆಯ ಶತಮಾನದ ಮಹಾನ್ ಸಂತ-ಅನುಭಾವಿ ಕವಿ. ಎಲ್ಲಾ ಸಂತರ ಬಗ್ಗೆ ಇರುವಂತೆ ಕಬೀರನ ಬಗ್ಗೆಯೂ ಅನೇಕ ಐತಿಹ್ಯಗಳಿವೆ. ಒಂದು ಜನಪ್ರಿಯ ಐತಿಹ್ಯದ ಪ್ರಕಾರ ಕಬೀರ್ ವಾರಾಣಸಿಯಲ್ಲಿ ನೀರು ಮತ್ತು ನೀಮಾ ಎಂಬ (ಜುಲಹಾ ಸಮುದಾಯದ) ನೇಕಾರ ಮುಸ್ಲಿಂ ದಂಪತಿಗೆ ಒಂದು ಕೆರೆಯ ಬಳಿ ಸಿಕ್ಕಿದನೆಂದು, ಅನಂತರ ಅವನನ್ನು ತಮ್ಮ ಮಗನಂತೆಯೇ ಆ ದಂಪತಿ ಬೆಳೆಸಿದರೆಂದು ಹೇಳಲಾಗುತ್ತದೆ. ಕಬೀರ್ ಮುಸ್ಲಿಮ್ ದಂಪತಿ ಮಗನೆಂದು, ಅವನ ಜನ್ಮಸ್ಥಳ ಮಘರ್ ಎಂಬ ಗ್ರಾಮವೆಂದು, ಅನಂತರ ಅವನು ವಾರಾಣಸಿಗೆ ಹೋಗಿ, ಅಲ್ಲಿಯೇ ಬಹು ಕಾಲ ವಾಸಮಾಡಿದನೆಂದು, ಆದರೆ ತನ್ನ ಬದುಕಿನ ಕೊನೆಯ ಘಟ್ಟದಲ್ಲಿ ತನ್ನ ಹುಟ್ಟೂರಿಗೇ ಹಿಂದಿರುಗಿದನೆಂದು ಮತ್ತೊಂದು ಐತಿಹ್ಯವು ಹೇಳುತ್ತದೆ. ಪ್ರಾಯಶಃ, ಕಬೀರನ ಪೂರ್ವಜರು ಹಿಂದೂಗಳಾಗಿದ್ದು ಇಸ್ಲಾಂ ಧರ್ಮಕ್ಕೆ ಕೇವಲ ಎರಡು ತಲೆಮಾರುಗಳ ಹಿಂದೆ ಮತಾಂತರಗೊಂಡವರು ಮತ್ತು ಆ ಕಾರಣದಿಂದ ಮತಾಂತರದ ನಂತರವೂ ಅವರು ಅನೇಕ ಹಿಂದೂ ಆಚರಣೆಗಳನ್ನು ಹಾಗೂ ನಂಬಿಕೆಗಳನ್ನು ಮುಂದುವರೆಸಿದರು.

ಬಾಲ್ಯದಿಂದಲೇ ವೈರಾಗ್ಯದತ್ತ ಆಕರ್ಷಿತನಾಗಿದ್ದ ಕಬೀರ್ ಅಂದಿನ ಕಾಲದಲ್ಲಿ ವೈಷ್ಣವ ಪಂಥದ ಪ್ರಸಿದ್ಧ ಸಂತರಾಗಿದ್ದ ರಾಮಾನಂದ ಅವರ ಶಿಷ್ಯನಾದನು. ಗೋಸಾಯಿ ಅಷ್ಟಾವಂದನ ಪ್ರಭಾವವೂ ಕಬೀರನ ಮೇಲೆ ಆಯಿತೆಂದು ವಿದ್ವಾಂಸರು ಹೇಳುತ್ತಾರೆ. ಬೆಳೆಯುತ್ತಾ ಬಂದಂತೆ ಕಬೀರ್, ರಾಮಾನಂದರ ಪ್ರಭಾವದಿಂದ ಅನೇಕ ಹಿಂದೂ ಆಚರಣೆಗಳನ್ನು ಅಳವಡಿಸಿಕೊಂಡದ್ದರಿಂದ ಅವನ ಸಮಕಾಲೀನ ಮುಸ್ಲಿಂ ಸಮಾಜದ ಕೋಪಕ್ಕೆ ಒಳಗಾದನು; ಒಂದು ಘಟ್ಟದಲ್ಲಿ, ವಾರಾಣಸಿಯ ಸುಲ್ತಾನ ಸಿಕಂದರ್‌ನ ಆಕ್ರೋಶಕ್ಕೂ ಒಳಗಾಗಿ, ಜೀವ ಭಯವನ್ನೂ ಅನುಭವಿಸಬೇಕಾಯಿತು. ಆದರೆ, ಅವಾವುದಕ್ಕೂ ಬಗ್ಗದ ಕಬೀರ್ ತನ್ನ ಧರ್ಮಾತೀತ ಮಾನವೀಯ ನಿಲುವಿಗೆ ಬದ್ಧನಾಗಿದ್ದನು. ಕೆಲ ಕಾಲದ ನಂತರ ಕಬೀರ್ ಹಿಂದೂ-ಮುಸ್ಲಿಂ ಧರ್ಮಗಳೆರಡನ್ನೂ ಮೀರಿದ ಸಂತನೆಂದು ಎಲ್ಲರಿಗೂ ಅರಿವಾಯಿತು. ಕೆಲವು ಸೂಫಿ ಪರಂಪರೆಗಳು ಕಬೀರನನ್ನು 'ಮುವಹ್ಹಿದ್' (ಎಂದರೆ ಯಾರನ್ನು ಸಾಂಪ್ರದಾಯಿಕ ಹಿಂದೂ ಅಥವಾ ಮುಸ್ಲಿಂ ಎಂದು ಕರೆಯಲಾಗುವುದಿಲ್ಲವೋ ಆ ವ್ಯಕ್ತಿ) ಎಂದು ಗುರುತಿಸುತ್ತವೆ.

ವಿಗ್ರಹಾರಾಧನೆ, ಜಾತಿಭೇದ, ಧಾರ್ಮಿಕ ಅಂಧಶ್ರದ್ಧೆ ಇವುಗಳನ್ನು ಪ್ರಾರಂಭದಿಂದಲೂ ವಿರೋಧಿಸುತ್ತಿದ್ದ ಕಬೀರ್ ಭಾರತದ ಶ್ರೇಷ್ಠ ಅನುಭಾವಿ ಕವಿಗಳಲ್ಲಿ ಒಬ್ಬ. ಅವಧಿ ಹಾಗೂ ಭೋಜಪುರಿ ಭಾಷೆಗಳಲ್ಲಿ 'ದೋಹಾ,' 'ಸಾಖಿ' ಇತ್ಯಾದಿ ಛಂದೋಪ್ರಕಾರಗಳಲ್ಲಿ ನೂರಾರು ಹಾಡುಗಳನ್ನು ಹಾಗೂ ವಚನಗಳನ್ನು ಕಬೀರ್ ರಚಿಸಿದ್ದಾನೆ.

ಕಬೀರನ ಎಲ್ಲಾ ರಚನೆಗಳನ್ನೂ ಭಗವಾನ್ ದಾಸ್ ಎಂಬ ಅವನ ಶಿಷ್ಯನು ಕ್ರಿ.ಶ. 1570ರಲ್ಲಿ, 'ಬೀಜಕ್' ಎಂಬ ಹೆಸರಿನ ಸಂಕಲನದಲ್ಲಿ ಸಂಪಾದಿಸಿದನು ಎಂಬುದು ವಿದ್ವಾಂಸರ ಅಭಿಮತ. ಕಬೀರನ ವಚನಗಳು ಹಾಗೂ ಭಜನ್‌ಗಳು ಎಲ್ಲಾ ಭಾರತೀಯ ಭಾಷೆಗಳಿಗೆ ಮತ್ತು ಅನೇಕ ಭಾರತೀಯೇತರ ಭಾಷೆಗಳಿಗೆ ಅನುವಾದಗೊಂಡಿವೆ. ಕಬೀರನ ಆಯ್ದ ನೂರು ಕವನಗಳನ್ನು ರವೀಂದ್ರನಾಥ ಟ್ಯಾಗೋರ್ ಮತ್ತು ಎವಲಿನ್ ಅಂಡರ್‌ವುಡ್ ಒಟ್ಟಾಗಿ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ (ಪ್ರಕಟ: 1915).

ಸ್ಥಾವರ ಸಂಕೇತಗಳನ್ನು ತಿರಸ್ಕರಿಸುತ್ತಿದ್ದ ಕಬೀರ್ ('ಉಳ್ಳವರು ಶಿವಾಲಯವ ಮಾಡುವರು' ಎಂಬ ಬಸವಣ್ಣನವರ ವಚನವನ್ನು ನೆನಪಿಸುವ) ತನ್ನ ಒಂದು ದೋಹಾದಲ್ಲಿ ಹೀಗೆ ಹೇಳುತ್ತಾನೆ: 'ತುರುಷ್ಕರಿಗೆ ಮಸೀದಿಗಳಲ್ಲಿ ಮತ್ತು ಹಿಂದೂಗಳಿಗೆ ದೇವಾಲಯಗಳಲ್ಲಿ / ಖುದಾ ಮತ್ತು ರಾಮ್ ಇಬ್ಬರೂ ಇದ್ದಾರೆ. / ಎಲ್ಲಿ ಮಸೀದಿ ಮತ್ತು ದೇವಾಲಯಗಳಿಲ್ಲವೋ / ಅಲ್ಲಿ ಸರ್ವಶಕ್ತನಾಗಿ ಆಳುವವರು ಯಾರು?'. ಇಡೀ ಜಗತ್ತಿಗೆ ಒಬ್ಬನೇ ದೇವರು ಎಂದು ಸಾರಿದ ಕಬೀರ್, ಆ ದೇವರನ್ನು ಕಾಣಲು ಯಾವ ಸಂಕೇತ-ಪ್ರತೀಕಗಳ ಅಗತ್ಯವಿಲ್ಲವೆಂದು, ಮತ್ತು ಭಕ್ತಿ ಮಾರ್ಗವು ಎಲ್ಲಾ ಜಾತಿ-ಮತ-ಲಿಂಗಗಳ ಜನರಿಗೆ ಮುಕ್ತವಾಗಿ ದೊರಕಬೇಕು ಎಂದು ಗಾಢವಾಗಿ ನಂಬಿದ್ದನು. ಆದರೆ, ಸಾಧನೆಯ ಹಾದಿಯಲ್ಲಿ ಸಮರ್ಥ ಗುರುವಿನ ಮಾರ್ಗದರ್ಶನ ಇರಬೇಕು ಎಂದು ಪ್ರತಿಪಾದಿಸಿದನು.

ಕಬೀರ್ ರಾಮಭಕ್ತ; ಅವನಿಗೆ ಶ್ರೀರಾಮನ ಬಗ್ಗೆ ಇದ್ದ ಭಕ್ತಿ 'ಮಧುರಭಕ್ತಿ'. ತನ್ನ ಅನೇಕ ಕವನಗಳಲ್ಲಿ ಕಬೀರ್